ಶ್ರೀ ಕೆ. ಎಚ್. ಹನುಮೇಗೌಡ.—ಈ ಕೆಲಸಕ್ಕೆ ಸೇರಿದ ಮೇಲೆ ಅನೇಕ ಜನಗಳಿಗೆ 28 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ. ಅವರು ಈಗ ಬೇರೆ ಕೆಲಸಗಳಿಗೆ ಹೋಗುವ ಹಾಗೆ ಇಲ್ಲ. ಅವರೆಲ್ಲ ರೆಗ್ಯುಲರ್ ಕ್ಲಿಯರ್ ವೇಕೆನ್ಸಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಮತ್ತು ಅವರಿಗೆ ಟ್ರೇನಿಂಗ್ ಕೂಡ ಆಗಿರುವುದರಿಂದ ಅವರನ್ನು ಮುಂದುವರಿಸುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆ ಏನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಾಗೆ ಮಾಡುವುದಕ್ಕೆ ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ—ಟಿ. ಸಿ. ಎಚ್. ಆದವರು ಡಿಸ್ಟ್ರಿಕ್ಟ್ ರೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಹೋಗಿ ಅವರು ಸೆರೆಕ್ಟ್ ಆಗಬಹುದು. ಆದರೆ ಬಿ. ಎಡ್. ಆಗಿರುವವರು ಪಿ. ಎಸ್.ಸಿ. ಗೆ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗುತ್ತದೆ. ಅಲ್ಲಿ ಡಿಗ್ರಿ ತರಗತಿಗಳಲ್ಲಿ ಬಂದಿರುವ ಮಾರ್ಕ್ಸ್ ನೋಡಿ ಇಂಟರ್‌ವ್ಯೂಗೆ ಕರೆಯುತ್ತಾರೆ. ಆದರೆ ಈ ಯೋಜನೆ ಪ್ರಕಾರ ನೇಮಕವಾಗಿರುವವರು ಗ್ರಾಮಾಂತರ ಪ್ರದೇಶಗಳಿಂದ ಬಂದವರಾಗಿರುವುದರಿಂದ ಅವರಿಗೆ ಇಂಟರ್‌ವ್ಯೂಗೆ ಕರೆ ಬರುವುದಿಲ್ಲ ; ಕೆಲಸವೂ ಸಿಕ್ಕುವುದಿಲ್ಲ. ಅವರಿಗೆ ಪ್ರಿಫರೆನ್ಸ್ ಕೊಡುವುದಾದರೆ ಟ್ರೇನಿಂಗ್ ಆಗಿರುವುದು ಮತ್ತು ಬಿ. ಎಡ್. ನಲ್ಲಿ ಬಂದಿರುವ ಮಾರ್ಕ್ಸ್ ಪರಿಗಣಿಸಿ ಅವನ್ನು ಅಬ್ಸಾರ್ಬ್ ಮಾಡಿಕೊಳ್ಳಬೇಕೆಂದು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಸಿಫಾರಸನ್ನು ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಾಗೆ ಮಾಡುವುದಕ್ಕೆ ಬರುವುದಿಲ್ಲ. They are not working in regular vacancies. I stand corrected.

ಶ್ರೀ ಕೆ. ಎಚ್. ಹನುಮೇಗೌಡ.—ಅನೇಕರಿಗೆ 28 ವರ್ಷ ವಯಸ್ಸಾಗಿ ಹೋಗಿದೆ. ಇಲ್ಲಿ ಕೆಲಸ ಕೊಡದೆ ಇದ್ದಿದ್ದರೆ ಅವರು ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದರು. ಲಕ್ಷಕಟ್ಟಲೆ ಜನಗಳಿಗೆ ಕೆಲಸ ಕೊಡದೆ ಇದ್ದರೆ ಮುಂದೆ ಗತಿ ಏನು? ಸರ್ಕಾರ ಇದಕ್ಕೆ ಹೊಣೆಯಾಗಬೇಕು. ಅವರನ್ನೆಲ್ಲ ಅಬ್ಸಾರ್ಬ್ ಮಾಡಬೇಕು. ಈ ಜವಾಬ್ದಾರಿಯಿಂದ ವಿದ್ಯಾ ಮಂತ್ರಿಗಳು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಏನು ಮಾಡುತ್ತಾರೆನ್ನುವುದಕ್ಕೆ ಉತ್ತರ ಕೊಡಬೇಕು.

Sri M. MALLIKARJUNA SWAMY.—Many are called but few are chosen.

Matter Under Rule 312

re : **non-repairing the High School Building, Kudur.**

4-30 P.M.

ಶ್ರೀ ಬೆಟ್ಟಸ್ವಾಮಿಗೌಡ (ಕುದೂರು).—ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕ್ ಕುದೂರಿನಲ್ಲಿರುವ ಪ್ರೌಢಶಾಲೆಯ ಕಟ್ಟಡ ದುರಸ್ತಿ ಮಾಡುತ್ತೇವೆಂದು ಈ ಹಿಂದೆಯೇ ಸರ್ಕಾರದವರು ನನ್ನ ಒಂದು ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವಾಗ ಹೇಳಿದ್ದರೂ ಸಹ ಇನ್ನೂ ರಿಪೇರಿ ಆಗಿಲ್ಲ ; ಅದಕ್ಕೆ ಕಾರಣವೇನು ಎಂದು ಮಾನ್ಯ ಮಂತ್ರಿಗಳಿಂದ ತಿಳಿಯುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಬೆಟ್ಟಸ್ವಾಮಿಗೌಡರು ರೂಲ್ 312 ಪ್ರಕಾರ ಸರ್ಕಾರದ ಮುಂದೆ ಏನು ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಉತ್ತರ ಹೇಳುವುದಾದರೆ, ಸರ್ಕಾರ ಇದರಲ್ಲಿ ವಿಫಲವಾಗಿಲ್ಲ ; ಅದಕ್ಕೆ ಕಾರಣವಿಷ್ಟೆ, ತಾ : 1-4-1971ರ ಸರ್ಕಾರದ ಆಜ್ಞೆ ಪ್ರಕಾರ ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳು ಮತ್ತು ಮುನಿಸಿಪಾಲಿಟಿಗಳು ನಡೆಸುತ್ತಿದ್ದ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡರು. ಅದು ಅದಮೇಲೆ ಇಲ್ಲಿಯ ತಾಲ್ಲೂಕ್ ಬೋರ್ಡಿನವರು ತಾ : 31-3-1973ರಲ್ಲಿ ನಮಗೆ ಎಲ್ಲ ಡಾಕ್ಯುಮೆಂಟ್ಸನ್ನು ಕಳಿಸಿಕೊಟ್ಟರು. ಆದರಲ್ಲಿ ಸ್ವಲ್ಪ ಕರೆಕ್ಷನ್ ಆಗಬೇಕಾಗಿದ್ದರಿಂದ ನಮ್ಮ ಇಲಾಖೆಯವರು ಅದನ್ನು ಅವರಿಗೇ ವಾಪಸ್ ಜನವರಿ 19 4ರಲ್ಲಿ ಕಳಿಸಿಕೊಟ್ಟರು. ಅವರಿಂದ ಮತ್ತೆ ನಮ್ಮ ಡೈರೆಕ್ಟರ್ ಅವರಿಗೆ ಬಂದಿದೆ. ಅವರಿಂದ ಸರ್ಕಾರಕ್ಕೆ ಬರಬೇಕಾಗಿದೆ. ಈಗ ಅಲ್ಲಿಯ ಕಟ್ಟಡಕ್ಕೆ ರಿಪೇರಿಯಾಗಬೇಕಾಗಿದೆ ಎಂದು ಏನು

ಮಾನ್ಯ ಸದಸ್ಯರು ಹೇಳಿದ್ದಾರೆ ಅದು ವಾಸ್ತವವಾದ ಸಂಗತಿ. ನಮ್ಮ ಸ್ಪೇಟ್ ಮಿನಿಸ್ಟರ್ ಅವರು ಈ ಬಗ್ಗೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದರು. ತಾಲ್ಲೂಕ್ ಬೋರ್ಡಿನವರಿಗೆ ಮತ್ತು ಸರ್ಕಾರಕ್ಕೆ ಒಂದು ಅಗ್ರಿಮೆಂಟ್ ಆದಮೇಲೆ ಈ ಶಾಲೆಯ ಕಟ್ಟಡದ ರಿಪೇರಿಯಾಗಲೀ, ಹೊಸ ಕೊಠಡಿಗಳನ್ನು ಕಟ್ಟಿಸುವುದಾಗಲೀ ಕೈಕೊಳ್ಳುವುದು ಒಳ್ಳೆಯದೆಂದು ಕಾನೂನು ಇಲಾಖೆಯವರು ಮತ್ತು ಹಣ ಕಾಸಿನ ಇಲಾಖೆಯವರು ಸಲಹೆ ಮಾಡಿದ್ದರು. ಈಗ ಅದೆಲ್ಲಾ ಮುಗಿದಿರುವುದರಿಂದ ನಮ್ಮ ಡೈರೆಕ್ಟರ್ ಅವರು ಚೀಫ್ ಇಂಜಿನಿಯರ್ ಅವರಿಗೆ ಒಂದು ಕಾಗದ ಬರೆದು ಅದರ ರಿಪೇರಿ ಬಗ್ಗೆ ಪ್ಲಾನ್ ಅಂಡ್ ಎಸ್ಟಿಮೇಟ್ ಮಾಡಿ ಕಳಿಸಿಕೊಡಿ ಎಂದು ಹೇಳಿದ್ದಾರೆ ಅದರ ರಿಪೇರಿಯಾಗುವವರೆಗೆ ಅಲ್ಲಿರತಕ್ಕಂಥ ಪ್ರೈಮರಿ ಶಾಲೆಯಲ್ಲಿಯೇ ಪ್ರಾಥಶಾಲೆಯನ್ನು ತಾತ್ಕಾಲಿಕವಾಗಿ ನಡೆಸುವುದಕ್ಕೆ ಏರ್ಪಾಡು ಮಾಡಬಹುದೆಂದು ಹೇಳಿದ್ದೇವೆ. ಪ್ರೈಮರಿ ಶಾಲೆಗೆ ಸೇರಿದಂತೆ 8 ರೂಮುಗಳಿವೆ ಜೊತೆಗೆ ಒಂದು ಚಾಲ್ಟ್ರಿಯನ್ನು ತೆಗೆದುಕೊಂಡು ಶಾಲೆ ನಡೆಸುತ್ತಿದ್ದಾರೆ. ಆದಕಾರಣ ಬೆಳಿಗ್ಗೆ ಪ್ರೈಮರಿ ಶಾಲೆಯನ್ನು ನಡೆಸಿ ಮಧ್ಯಾಹ್ನದ ನಂತರ ಪ್ರಾಢಶಾಲೆಯನ್ನು ನಡೆಸಬಹುದೆಂದು ಹೇಳಿದ್ದೇವೆ.

ಶ್ರೀ ಬೆಟ್ಟಸ್ವಾಮಿಗೌಡ.—ಈಗ ಪ್ರೈಮರಿ ಶಾಲೆಯವರಿಗೇ ಸ್ಥಳ ಸಾಲದೆ ಬೇರೆ ಕಡೆ ನಡೆಸುತ್ತಿದ್ದಾರೆ. ಆದಕಾರಣ ಅವರು ಪ್ರಾಢಶಾಲೆ ನಡೆಸಲು ಅವಕಾಶ ಕೊಡುವುದು ಸಾಧ್ಯವಾಗುವುದಿಲ್ಲ. ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ಅಗ್ರಿಮೆಂಟಿಗೆ ಸಹಿ ಮಾಡಿದ್ದರೂ ಸಹ ಇಲ್ಲಿಯವರೆಗೆ ಸರ್ಕಾರದವರು ಆ ಕಟ್ಟಡವನ್ನು ರಿಪೇರಿ ಮಾಡಿಸದಿರುವುದಕ್ಕೆ ಕಾರಣವೇನು ? ಆ ಕಟ್ಟಡದ ರಿಪೇರಿ ಮಾಡಿಸದೇ ಹೋದರೆ ಸರ್ಕಾರ ಅದರಲ್ಲಿ ವಿಫಲವಾಗಿದೆ ಎಂದು ಹೇಳಬೇಕೇ ಅಥವಾ ಇಲ್ಲ ಎಂದು ಹೇಳಬೇಕೇ ? 9 ತಿಂಗಳ ಹಿಂದೆ ಕಾಲ್ ಅಟೆನ್‌ಷನ್ ಮೂಲಕ ಈ ವಿಷಯ ಪ್ರಸ್ತಾಪ ಮಾಡಿದ್ದರೂ ಸಹ ಇಲ್ಲಿಯವರೆಗೆ ರಿಪೇರಿ ಮಾಡಿಸದಿರಲು ಕಾರಣವೇನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೆಲವು ಅಗ್ರಿಮೆಂಟ್‌ಗಳು ಆಗಬೇಕಾಗಿದ್ದರಿಂದ ವಿಧಾನವಾಯಿತು ; ಈಗ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡುವುದಕ್ಕೆ ಹೇಳಿದ್ದೇವೆ. ಅದು ಆದಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಬೆಟ್ಟಸ್ವಾಮಿಗೌಡ.—ಆ ಕಟ್ಟಡಕ್ಕೆ ರಿಪೇರಿ ಮಾಡಲು ಸಾಧ್ಯವಿಲ್ಲ, ಬೇರೆ ಕಟ್ಟಡವನ್ನೇ ಕಟ್ಟಬೇಕು ಎಂದು ನಿಮ್ಮ ಇಂಜಿನಿಯರ್ ಅವರು ಸಲಹೆ ಕಳಿಸಿಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ; ಇದರ ಬಗ್ಗೆ ಏನು ವಿಚಾರ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ಸಲಹೆ ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಪರಿಶೀಲನೆ ಮಾಡಲಾಗುವುದು.

Notice of an Adjournment Motion

re : Shifting of the Toddy Shop from TCM Royan Road

† ಶ್ರೀ ಟಿ. ಆರ್. ಶಾಮಣ್ಣ(ಕೋಚೆ).—ಮಾನ್ಯ ಅಧ್ಯಕ್ಷರೇ, ಈ ತಿಂಗಳ 18ನೇ ತಾರೀಖು ಟಿ. ಸಿ. ಎಂ. ರಾಯನ್ ರೋಡಿನಲ್ಲಿರುವ ಹೆಂಡದ ಅಂಗಡಿಯನ್ನು ಅಲ್ಲಿಂದ ತೆಗೆಸುವುದರ ಬಗ್ಗೆ ಮಾನ್ಯ ಮಂತ್ರಿಗಳು ನನ್ನ ಕಾಲ್ ಅಟೆನ್‌ಷನ್ ನೋಟೀಸ್‌ಗೆ ಉತ್ತರ ಕೊಡುವಾಗ ಮಾಡಿದ ಸ್ಟೇಟ್‌ಮೆಂಟ್ ಬಗ್ಗೆ, ಅಂದೇ ನಾನು ಕೇಳಿದ ಕೆಲವು ಪ್ರಶ್ನೆಗಳಿಗೆ ಅವರು ಕೊಟ್ಟ ಉತ್ತರ ಸತ್ಯಕ್ಕೆ ದೂರವಾಗಿದೆ. ಅದನ್ನು ನಾನು ಈಗ ಸ್ಪಷ್ಟಪಡಿಸಬೇಕಾಗಿದೆ.

ಮೊದಲನೆಯದಾಗಿ, ಅವರು ಹೇಳಿದ್ದೇನೆಂದರೆ, ಅಲ್ಲಿರುವ ದೇವಸ್ಥಾನವನ್ನು ಕಟ್ಟುವುದಕ್ಕೆ ಮೊದಲೇ ಅಲ್ಲಿ ಹೆಂಡದ ಅಂಗಡಿ ಇತ್ತು ಎಂದು. ಆದರೆ ನನ್ನ ಹತ್ತಿರವಿರುವ ಎವಿಡೆನ್ಸ್ ಪ್ರಕಾರ 1940ನೇ ಇಸವಿಯಲ್ಲಿಯೇ ಅಂದು ಎಂ. ಎಲ್. ಸಿ. ಆಗಿದ್ದ ಶ್ರೀ ಮುರುಗೇಶ ಪಿಳ್ಳೆ ಎಂಬುವರು ಆ ದೇವಸ್ಥಾನವನ್ನು ಕಟ್ಟಿಸಲೇ ಫಾಂಡೇಷನ್ ಹಾಕಿರುವುದಕ್ಕೆ ಸಾಕ್ಷಿ ಇದೆ. ಮತ್ತು ಅಲ್ಲಿರುವ ಕಮ್ಯುನಿಟಿ ಹಾರ್‌ಗೆ 1946ರಲ್ಲಿ ರಾಯನ್ ಅವರು ಫಾಂಡೇಷನ್ ಹಾಕಿದ್ದಕ್ಕೆ ಸಾಕ್ಷಿ ಇದೆ. ಆದರೆ ಅಲ್ಲಿ ಹೆಂಡದ ಅಂಗಡಿ ಪ್ರಾರಂಭವಾಗಿದ್ದು ಇತ್ತೀಚೆಗೆ. ನಾನು ಈ ಊರಿನಲ್ಲಿ ಕಳೆದ 50 ವರ್ಷಗಳಿಂದಲೂ ಇದ್ದೇನೆ. ಮತ್ತು ಮಾನ್ಯ ನಾಗಣ್ಣನವರು ಅವರು ಹುಟ್ಟಿದಾಗಿನಿಂದಲೂ ಇಲ್ಲಿಯೇ ಇದ್ದಾರೆ. ಆ ದೇವಸ್ಥಾನದ ಗೋಪುರವನ್ನು ಮಾತ್ರ 6 ವರ್ಷಗಳ ಕೆಳಗೆ ಕಟ್ಟಿಸಲಾಗಿದೆ. ಅದಕ್ಕೆ ಮಾನ್ಯ ನಾಗಣ್ಣನವರೇ ಸಿಮೆಂಟ್ ಕೊಟ್ಟಿದ್ದಾರೆ. ಆದಕಾರಣ ಆ ಜಾಗದಲ್ಲಿ ಹೆಂಡದ ಅಂಗಡಿ